ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ?

(ಇ) ಈ ಆಡಳಿತದ ದೇವಾಲಯಗಳಲ್ಲಿ ನ್ಯಾಯಾಲಯವೇ ಕಾರ್ಯನಿರ್ವಾಹಕ ಸದಸ್ಯರನ್ನು ನೇಮಕ ಮಾಡಲು ಆದೇಶ ನೀಡಿದ್ದರೂ ಸದಸ್ಯರನ್ನು ನೇಮಕ ಮಾಡದಿರಲು ಕಾರಣವೇನು ? ಹಾಗೂ ಇನ್ನುಳಿದ ಎಷ್ಟು ಸದಸ್ಯರ ನೇಮಕಾತಿ ಬಾಕಿ ಇದೆ ?

(ಈ) ಈ ವೇಳೆಗೆ ಕುರಿತ ಬಗ್ಗೆ ಕೂಡಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ೨೫೦

(ಆ) ಧರ್ಮದತ್ತಿ ಕಾರ್ಯನಿರ್ವಾಹಕ ಸದಸ್ಯ ಎಂಬ ಪದನಾಮ ಕಾನೂನಿನಲ್ಲಿ ಇಲ್ಲ. ೨೫೦ ದೇವಾಲಯಗಳಿಗೆ ಮೊಕ್ತೇಸರರ ಮಂಡಳಿ (ಬೋರ್ಡ್ ಆಫ್ ಟ್ರಸ್ಟೀಸ್) ರಚಿಸಲಾಗಿದೆ. ೧೪ ಪರಿಶಿಷ್ಟ ಜಾತಿಯವರನ್ನು ಒಟ್ಟು ಪರಿಶಿಷ್ಟ ಪಂಗಡದ ಸದಸ್ಯರನ್ನು ನೇಮಿಸಲಾಗಿದೆ.

(ಇ) ನ್ಯಾಯಾಲಯದ ಆದೇಶದಂತೆ ಪಡುಬಿದ್ರಿ ಮಹಾಲಿಂಗೇಶ್ವರ ದೇವಾಲಯಕ್ಕೆ ಮಂಡಳಿ ರಚಿಸಲಾಗಿದೆ. ಶ್ರೀ ಮಂದರ್ತಿ ದುರ್ಗಾ ಪರಮೇಶ್ವರಿ ದೇವಾಲಯ ಹಾಗೂ ಕಾಪು ಹೊಸಮಾರಿ ಗುಡಿಗೆ ಆಡಳಿತ ಮೊಕ್ತೇಸರರ ಮಂಡಳಿ ನೇಮಕ ಮಾಡಬೇಕೆಂದು ನ್ಯಾಯಾಲಯ ಆದೇಶ ನೀಡಿದೆ. ಅದರಂತೆ ಈ ದೇವಾಲಯಗಳಿಗೆ ಮೊಕ್ತೇಸರರ ಮಂಡಳಿ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಈ) ಹೌದು.

ರಾಜ್ಯದಲ್ಲಿನ ಕಲ್ಯಾಣ ಮಂಟಪಗಳು

೧೦೫೯. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಕಟ್ಟಿಸಿರುವ ಕಲ್ಯಾಣ ಮಂಟಪಗಳು ಎಷ್ಟು ?

(ಆ) ಎಲ್ಲೆಲ್ಲಿ ಇಂತಹ ಮಂಟಪಗಳನ್ನು ಕಟ್ಟಲು ಮಾಡಿರುವ ವೆಚ ಎಷ್ಟು ?

(ಇ) ಹೊಸದುರ್ಗ ಪಟ್ಟಣದಲ್ಲಿ ಜನಸಾಮಾನ್ಯರ ಒಳಿತಿಗಾಗಿ ಸರ್ಕಾರದ ವತಿಯಿಂದ ಒಂದು ಸಾರ್ವಜನಿಕ ಕಲ್ಯಾಣ ಮಂಟಪ ಕಟ್ಟಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ಯಾವುದೂ ಇಲ್ಲ.

(ಆ) ರಾಜ್ಯದ ಒಳಗಡೆ ಸರ್ಕಾರದ ವತಿಯಿಂದ (ಮುಜರಾಯಿ ಇಲಾಖೆಯಿಂದ) ಕಲ್ಯಾಣ ಮಂಟಪಗಳನ್ನು ಕಟ್ಟಿಸಿಲ್ಲ. ಸಂಬಂಧ ಪಟ್ಟ ದೇವಸ್ಥಾನದ ನಿಧಿ ಉಪಯೋಗಿಸಿ ಕೆಲವು ಕಲ್ಯಾಣ ಮಂಟಪ ಕಟ್ಟಿಸಿದೆ. ರಾಜ್ಯದ ಹೊರಗಡೆ ಸರ್ಕಾರ (ಈ ಇಲಾಖೆ ವತಿಯಿಂದ) ಕಟ್ಟಿಸಿರುವ ಕಲ್ಯಾಣ ಮಂಟಪಗಳು ಮತ್ತು ಅವುಗಳನ್ನು ಕಟ್ಟಲು ಆಗಿರುವ ಖರ್ಚು ಈ ಕೆಳಕಂಡಂತೆ ಇದೆ.—

೧)	ತಿರುಮಲ–ತಿರುಪತಿ	೨	೪೭.೭೦ ಲಕ್ಷ
೨)	ಮಂತ್ರಾಲಯ	೧	೨೭.೯೦ ಲಕ್ಷ

(ಇ) ಪೂರ್ಣ ಸರ್ಕಾರದ ವತಿಯಿಂದಲೇ ಕಲ್ಯಾಣ ಮಂಟಪ ಕಟ್ಟಿಸುವ ಯೋಚನೆ ಸದ್ಯಕ್ಕೆ ಸರ್ಕಾರಕ್ಕಿಲ್ಲ.